

# ಜಾಣ-ಜಾಣೆಯರ ಸಿನಿಮಾ

'ಮಾಸ್ಟರ್‌ಪೀಸ್' ಚಿತ್ರದಲ್ಲಿ ಯಶ್ ಅವರೊಂದಿಗೆ ದಂತದ ಗೊಂಬೆಯಂತೆ ಬಳುಕಿದ್ದ ಶಾನ್ವಿ ಶ್ರೀವಾಸ್ತವ್ ನಟನೆಯ ಹೊಸ ಚಿತ್ರವೊಂದು ತೆರೆಗೆ ಸಿದ್ಧವಾಗುತ್ತಿದೆ. 'ಸುಂದರಾಂಗ ಜಾಣ' ಹೆಸರಿನ ಈ ಚಿತ್ರದ ನಾಯಕ ಗಣೇಶ್. 'ಮುಂಗಾರು ಮಳೆ 2' ನಿರೀಕ್ಷಿತ ಯಶಸ್ಸು ಗಳಿಸದ ಹಿನ್ನೆಲೆಯಲ್ಲಿ ಈಗ ಗಣೇಶ್ ಗಮನವೆಲ್ಲ ಜಾಣನ ಕಡೆಗೆ.

ಶಾನ್ವಿ ಪಾಲಿಗೆ 'ಮಾಸ್ಟರ್‌ಪೀಸ್' ಅದೃಷ್ಟದ ಸಿನಿಮಾ. ಎರಡು ವರ್ಷಗಳ ಹಿಂದೆ 'ಚಂದ್ರಲೇಖ' ಸಿನಿಮಾದಲ್ಲಿ ನಟಿಸಿದ್ದರೂ ಕನ್ನಡ ಚಿತ್ರರಂಗದಲ್ಲಿ ಅವರಿಗೆ ಹೆಚ್ಚು ಅವಕಾಶಗಳೇನೂ ದೊರೆತಿರಲಿಲ್ಲ. ಆದರೆ, ಯಶ್ ಜೊತೆಗಿನ ಸಿನಿಮಾ ಅವಕಾಶಗಳ ಬಾಗಿಲನ್ನು ತೆರೆದಂತಿದೆ. 'ಸಾಹೇಬ', 'ಮಫ್ತಿ' ಚಿತ್ರಗಳಲ್ಲಿ ಅವಕಾಶ ಪಡೆದ ಅವರು, ಈ ನಡುವೆ ಸದ್ದಿಲ್ಲದಂತೆ 'ಸುಂದರಾಂಗ ಜಾಣ' ಶೂಟಿಂಗ್ ಮುಗಿಸಿದ್ದಾರೆ.

'ಸುಂದರಾಂಗ ಜಾಣ' ರಮೇಶ್ ಅರವಿಂದ್ ನಿರ್ದೇಶನದ ಸಿನಿಮಾ. ರಾಕ್‌ಲೈನ್ ವೆಂಕಟೇಶ್ ಅವರಿಗೆ ತೆಲುಗು ಚಿತ್ರವೊಂದನ್ನು ರಮೇಶ್ ಕನ್ನಡಕ್ಕೆ ತಂದಿದ್ದಾರೆ. 'ದೂರದಿಂದ ಬಂದಂಥ ಸುಂದರಾಂಗ ಜಾಣ' ಹಾಡಿನ ಒಂದು ಭಾಗವನ್ನೇ ರಮೇಶ್ ಚಿತ್ರದ ಶೀರ್ಷಿಕೆಯಾಗಿಸಿದ್ದಾರೆ. ಈ ಹಾಡು ಕೂಡ ಚಿತ್ರದಲ್ಲಿ ಆಗಾಗ ಅನುರಣಿಸಲಿದೆಯಂತೆ.

ಅಜನೀಶ್ ಲೋಕನಾಥ್ ಸಂಗೀತ, ಮನೋಹರ ಜೋಷಿ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ. ದೀಪಾವಳಿ ಸಮಯಕ್ಕೆ ಚಿತ್ರವನ್ನು ತೆರೆ ಕಾಣಿಸುವ ಉದ್ದೇಶ ನಿರ್ಮಾಪಕರಿಗಿದ್ದರೂ, ಸದ್ಯಕ್ಕೆ ಚಾಲ್ತಿಯಲ್ಲಿರುವ ಸಿನಿಮಾಗಳ ಉಬ್ಬರವನ್ನು ನೋಡಿದರೆ ಜಾಣ ನವೆಂಬರ್‌ನಲ್ಲಿ ತೆರೆಗೆ ಬರುವ ಸಾಧ್ಯತೆಯೇ ಹೆಚ್ಚು.

# ಅಂತರಂಗದ ಸೌಂದರ್ಯ

'ಬ್ಯೂಟಿಫುಲ್ ಮನಸುಗಳು' ಚಿತ್ರದ ಗೀತೆಗಳ ಧ್ವನಿಮುದ್ರಿಕೆ ಪೇಟೆಗೆ ಬಂದಿದೆ. ಅಲ್ಲಿಗೆ, ಈ ಚಿತ್ರದ ಬಿಡುಗಡೆಯ ದಿನಗಣನೆಗೆ ಚಾಲನೆ ದೊರೆತಂತಾಗಿದೆ. ಜನಪ್ರಿಯ ನಟ ದರ್ಶನ್ ಅವರು ಧ್ವನಿಮುದ್ರಿಕೆ ಬಿಡುಗಡೆ ಮಾಡಿ, ಶುಭ ಹಾರೈಸಿರುವುದು ವಿಶೇಷ. ನಿರ್ದೇಶಕ ವಿಜಯಪ್ರಸಾದ್, ಸಂಗೀತ ನಿರ್ದೇಶಕ ಅನೂಪ್ ಸೀಳಿನ್, ಕಲಾವಿದರಾದ ಅಚ್ಯುತಕುಮಾರ್, ತಬಲಾ ನಾಣಿ ಮುಂತಾದವರು 'ಬ್ಯೂಟಿಫುಲ್' ಹಾಡುಗಳ ಅನಾವರಣಕ್ಕೆ ಸಾಕ್ಷಿಯಾಗಿದ್ದರು.

'ಬ್ಯೂಟಿಫುಲ್ ಮನಸುಗಳು' 2016ರ ಬಹುನಿರೀಕ್ಷೆಯ ಚಿತ್ರಗಳಲ್ಲೊಂದು. ಜಯತೀರ್ಥ ನಿರ್ದೇಶನದ ನಾಲ್ಕನೇ ಚಿತ್ರವಾದ ಇದು, ಶೀರ್ಷಿಕೆಯ ಕಾರಣದಿಂದಲೇ ಕುತೂಹಲ ಕೆರಳಿಸಿರುವ ಸಿನಿಮಾ. ನಿರ್ದೇಶಕರ ಅಭಿರುಚಿ ಹಾಗೂ ಅಂತರಂಗದ ಸೌಂದರ್ಯವನ್ನು ಅವರ ಮೊದಲೆರಡು ಚಿತ್ರಗಳನ್ನು ನೋಡಿದವರು ಬಲ್ಲರು. ಚಿತ್ರದ ನಾಯಕ ನೀನಾಸಂ ಅಶ್ವತ್ಥ್ ಹಾಗೂ ನಾಯಕಿ ಶ್ರುತಿ ಹರಿಹರನ್ ಕೂಡ ಸೂಕ್ಷ್ಮ ಸಂವೇದನೆಗಳ ಕಲಾವಿದರು. ಅಪ್ಪಟ ಕಲಾವಿದರನ್ನು ಇಟ್ಟುಕೊಂಡು ಜಯತೀರ್ಥ ರೂಪಿಸಿರುವ ಸಿನಿಮಾ ಸಹೃದಯರಲ್ಲಿ ಸಹಜವಾಗಿಯೇ ನಿರೀಕ್ಷೆ ಹುಟ್ಟಿಸಿದೆ.

'ರಾಕೆಟ್' ಸಿನಿಮಾದ ನಂತರ ಸತೀಶ್ ತಾರಾ ವರ್ಚಸ್ಸಿನ ಪ್ರಭಾವಳಿಯಲ್ಲಿ ಕಾಣಿಸಿಕೊಂಡಿದ್ದು ಕಡಿಮೆ. ನಿರ್ಮಾಪಕರಾಗಿ ಅನುಭವವನ್ನಷ್ಟೇ ಸಂಪಾದಿಸಿದಂತಿರುವ ಅವರು, ನಟನಾಗಿ ಸೋತಿದ್ದಿಲ್ಲ. ಅವರ ಪುನರಾಗಮನದ ಚಿತ್ರವಾಗಿ ಕೂಡ ಜಯತೀರ್ಥರ ಸಿನಿಮಾಕ್ಕೆ ಮಹತ್ವವಿದೆ. 'ಸ್ಕಂದ ಆಡಿಯೊ'ದ ಪ್ರಸನ್ನ 'ಬ್ಯೂಟಿಫುಲ್ ಮನಸುಗಳು' ಚಿತ್ರದ ನಿರ್ಮಾಪಕರು. ಬಿ.ಜೆ. ಭರತ್ ಸಂಗೀತ ಹಾಗೂ ಕಿರಣ್ ಹಂಪಾಪುರ ಛಾಯಾಗ್ರಹಣ ಚಿತ್ರಕ್ಕಿದೆ.

■ ರಘು

